ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಹಾಸನ ಇವರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳ ಬಗ್ಗೆ ಇದುವರೆವಿಗೂ ಯಾವುದೇ ಅಂದಾಜು ಪಟ್ಟಿಯನ್ನು ಕಳುಹಿಸಿರುವುದಿಲ್ಲ. ರೂ. 28,000-00 ಗಳನ್ನು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ತಗಲುವ ಅಂದಾಜಿನ ಬಗ್ಗೆ ಸಂಬಂದಿಸಿದ ಪ್ರದೇಶವನ್ನು ಮೋಜಣಿ ಮಾಡಲು ತೆಗೆದುಕೊಂಡಿರುತ್ತಾರೆ. ಆದರೆ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಹಾಸನ ಇವರು 1993-94 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಟ್ಟಿರುತ್ತಾರೆ.

ಇ) ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಈ ಆಕ್ಷೇಪಣೆಯನ್ನು ಕೈ ಬಿಡುವಂತೆ ದಿನಾಂಕ 5-7-95 ರಂದು ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆಗೆ ಪತ್ರ ಬರೆದಿದ್ದಾರೆ.

ವಿಷಯ :- ಸಾರ್ವಜನಿಕ ಉದ್ಯಮಗಳ ಸಂಖ್ಯೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2339 (2770)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು ;

ಆ) 1994-95 ನೇ ಸಾಲಿನ ವಾರ್ಷಿಕ ಸಮೀಕ್ಷಾ ವರದಿಯನ್ನು ನೀಡಿರುವ ಉದ್ಯಮಗಳ ಸಂಖ್ಯೆ ಎಷ್ಟು? ಅವು ಯಾವುವು ;

ಇ) 1994-95 ನೇ ಸಾಲಿನ ವರದಿ ಬಂದ ಉದ್ಯಮಗಳಲ್ಲಿ ಲಾಭದಲ್ಲಿರುವ ಉದ್ದಿಮೆಗಳ ಸಂಖ್ಯೆ ಎಷ್ಟು? ಅವು ಯಾವುವು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :-

ಅ) ದಿನಾಂಕ 31-3-1995 ರಲ್ಲಿ ಈ ಮಹೋದ್ಯಮದ ವ್ಯಾಪ್ತಿಯಲ್ಲಿ 76 ಸಾರ್ವಜನಿಕ ಉದ್ದಿಮೆಗಳು ಇವೆ.

ಆ) 1994-95 ನೇ ಸಾಲಿನ ಲೆಕ್ಕಪತ್ರಗಳನ್ನು ಸಲ್ಲಿಸಲು ಉದ್ಯಮಗಳಿಗೆ ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶ ಇರುವುದರಿಂದ ವಾರ್ಷಿಕ ಸಮೀಕ್ಷಾ ವರದಿಯನ್ನು ಈಗಲೇ ನೀಡುವ ಪ್ರಸಕ್ತಿ ಬರುವುದಿಲ್ಲ.

ಇ) ಈ ಮಾಹಿತಿಯನ್ನು 15-10-1995 ರ ಒಳಗೆ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮಕ್ಕೆ ನೀಡಲು ಸೂಚಿಸಲಾಗಿದೆ.

(ಈ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ :- ಚಿಕ್ಕಬಳ್ಳಾಪುರ ಪುರಸಭೆಯ ಶಿಶುವಿಹಾರ ಕಟ್ಟಡದ ದುರುಪಯೋಗ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2340 (2985)